Upgrading of L. F. Dispensary at Holenarasipur

530. Sri H. D. DEVE GOUDA (Holenarasipur).—

Will the Minister for Health be plesed to state :—

(*a*) whether the bed strength of L. F. Dispensary at Holenarasipur was increased to 50 beds by upgrading it as a General Hospital ;

(*b*) whether it is not a fact that due to insufficient accommodation the bed strength could not be increased to 50 beds from 25 beds though it was upgraded about five years back ;

(*c*) whether it is not a fact that there is no X-Ray Unit in this Dispensary ;

(*d*) the steps taken to provide additional accommodation and also X-Ray unit to this Dispensary ?

Sri H. SIDDAVEERAPPA (Minister for Health).—

(*a*) Yes.

(*b*) Yes.

(*c*) Yes.

(*d*) Plans and estimates from the Public Works Department authorities for construction of additional wards, X-Ray Block, etc., are awaited.

ಶ್ರೀ ಎಚ್. ಡಿ. ದೇವೇಗೌಡ.—ನನ್ನ ಮೊದಲ ಮೂರು ಪ್ರಶ್ನೆಗಳಿಗೆ ಉತ್ತರ ಕೊಡುತ್ತಾ 'ಹೌದು', ನಿಜ, ನಿಜ, ಎಂದು ಒಪ್ಪಿಕೊಂಡು ಕೊನೆಯ ಪ್ರಶ್ನೆಗೆ ಉತ್ತರ ಕೊಡುತ್ತಾ ಹೆಚ್ಚಿನ ವಿಭಾಗಗಳನ್ನು ಹಾಗೂ ಕ್ಷ ಕಿರಣ ಕಟ್ಟಡಗಳನ್ನು ನಿರ್ಮಿಸುವ ಬಗ್ಗೆ ಲೋಕೋಪಯೋಗಿ ಇಲಾಖಾ ಅಧಿಕಾರಿಗಳಿಂದ ನಕ್ಷೆ ಮತ್ತು ಅಂದಾಜುಗಳನ್ನು ನಿರೀಕ್ಷಿಸಲಾಗುತ್ತಿದೆ ಎಂದು ಹೇಳಿದ್ದೀರಿ. ನನಗೆ ತಿಳಿದ ಮಟ್ಟಿಗೆ ಇದರ ಬಗ್ಗೆ ಎಸ್ಟಿಮೇಟ್ ಆಗಿ, ಸ್ಕ್ರುಟಿನಿ ಕೂಡ ಆಗಿ, ಅಡ್ಮಿನಿಸ್ಟ್ರೇಟಿವ್ ಸ್ಯಾಂಕ್ಷನ್ ಆಗಿ ಒಂದು ಹಂತದಲ್ಲಿ ಈ ಕೆಲಸವನ್ನು ತೆಗೆದುಕೊಳ್ಳುವ ಬಗ್ಗೆ 1969ರ ಬಡ್ಜೆಟ್‌ನಲ್ಲಿ ಸೇರಿಸರಾಗಿದ್ದಿತು ಎಂದು ನನಗೆ ತಿಳಿದು ಬಂದಿದೆ. ಅದು ನಿಜವಾಗಿದ್ದರೆ ಈ ಸಾಲಿನ ಬಡ್ಜೆಟ್‌ನಲ್ಲಿಯೇ ಇದನ್ನು ಸೇರಿಸಿ ಮಾಡಿಸಿಕೊಡುತ್ತೀರಾ ಎಂದು ತಾವು ಹೇಳಿದರೆ ಸಾಕು.

†ಶ್ರೀ ಎಚ್. ಸಿದ್ದವೀರಪ್ಪ.—ನಮಗೂ ಅನುಮಾನ ಬಂದಿತ್ತು. ಇಲ್ಲಿ ಕೊಟ್ಟಿರುವ ಇನ್‌ಫರ್‌ಮೇಷನ್ ಫೆಬ್ರವರಿ 1972ರದ್ದು. ಆದ್ದರಿಂದ ಇದರ ಎಲ್ಲ ವಿವರಗಳನ್ನು ತರಿಸಿ ಕೊಂಡು ಅದರ ಬಗ್ಗೆ ಎಸ್ಟಿಮೇಟ್ ಆಗಿದ್ದರೆ ಕೂಡಲೇ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೊಡುತ್ತೇವೆ.

MADAM SPEAKER.—Now Questions are over.